ಶ್ರೀ ಜಗದೀಶ್ ಶೆಟ್ಟರ್ : ತೋಟಗಾರಿಕಾ ಇಲಾಖೆ ನಿರ್ದೇಶಕರು ಹೆಚ್ಚುವರಿಯಾಗಿ ಕರ್ನಾಟಕ ರಾಜ್ಯ ತೋಟಗಾರಿಕಾ ಮಿಷನ್‌ನಿಂದ ನಿರ್ದೇಶಕರಾಗಿರುತ್ತಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಇನ್ನೂ ಪೋಸ್ಟಿಂಗ್ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈಗ ಸದನದಲ್ಲಿ ಹೇಳಿದ್ದೇನಲ್ಲ.

ಅಧ್ಯಕ್ಷರು : ಮಾನ್ಯ ಬೋಸರಾಜುರವರೆ, ತಮ್ಮ ಒಂದು ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಎಸ್. ಬೋಸರಾಜು : ಲಿಂಗಸುಗೂರ್‌ದು ಸ್ಟೇ ಮಾಡಿದ್ದಾರೆ. ಸಿಂಧನೂರಿನಲ್ಲಿ ಕಂಟಿನ್ಯೂ ಮಾಡುವುದಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ.

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಒಟ್ಟಿಗೆ ಎದ್ದು ನಿಂತು ಮಾತನಾಡಿದ್ದರಿಂದ ಕೇಳಿಸಲಿಲ್ಲ)

ಅಧ್ಯಕ್ಷರು : ಈಗ ನೀವು ಹೀಗೆ ಒಟ್ಟಿಗೆ ಎದ್ದು ನಿಂತು ಬಿಟ್ಟರೆ ಹೇಗೆ? ಈಗ ಗಮನ ಸೆಳೆಯುವವರು ಬಹಳ ಸದಸ್ಯರು ಕಾದುಕೊಂಡು ಕುಳಿತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬಜೆಟ್ ಮೇಲೆ ಮಾತನಾಡುವಾಗ ಅವ್ಕೊತ್ತು ಉಪ ಮುಖ್ಯಮಂತ್ರಿಗಳಿದ್ದರು, ತೆಗೆಯುತ್ತೇವೆಂದು ಒಪ್ಪಿಕೊಂಡರು. ಅದನ್ನು ಪರಿಶೀಲಿಸುತ್ತೇವೆಂತಲೂ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : 10 ಸಾವಿರ ಕೆಲಸಗಾರರಿಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಈಗ calling attention ಆಗಲಿ. ಮಾನ್ಯ ಮಾಧುಸ್ವಾಮಿಯವರೆ, ಕೊನೆಯಲ್ಲಿ ಕೇಳಿ. ನೀವೇನೂ ಎದ್ದು ಹೋಗುವುದಿಲ್ಲವಲ್ಲ. ನೀವು ಕೊನೆವರೆಗೂ ಕುಳಿತಿರುತ್ತೀರಿ ತಾನೇ. ಕೊನೆಯಲ್ಲಿ ಕೇಳಿ. ಈಗ calling attention ಆಗಲಿ.

ವಿಷಯ: (ಖೂ) ಸಾತನೂರು ಕ್ಷೇತ್ರದ ಅಭಿವೃದ್ಧಿ ಹಾಗೂ ರಸ್ತೆ ರಿಪೇರಿ ಕೆಲಸ ಎರಡು ವರ್ಷದಿಂದ ಆಗದಿರುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೆ, ನಾನು 27ನೇ ತಾರೀಖು ಎರಡನೆ ತಿಂಗಳು 2006ರಂದು ಗಮನಸೆಳೆಯುವ ಸೂಚನೆಯನ್ನು ಕೇಳಿದ್ದೆ. ನನ್ನ ಕ್ಷೇತ್ರದ ರಸ್ತೆಗಳ ಅಭಿವೃದ್ಧಿ ಬಗ್ಗೆ ಕಳೆದ ಎರಡೂವರೆ ವರ್ಷದಿಂದ ಯಾವುದೇ ಕೆಲಸವಾಗಿಲ್ಲ. ಟೆಂಡರುಗಳನ್ನು ಕರೆದಿದ್ದಾರೆ. ಒಂದು ಕೆಲಸವನ್ನು ತೆಗೆದುಕೊಂಡಿಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಲಕ್ಷ ರೂಪಾಯಿ ಕೆಲಸ ಕೂಡ ಎರಡು ವರ್ಷದಿಂದ ಇಲ್ಲಿಯವರೆಗೆ ಪ್ರಾರಂಭವಾಗಿಲ್ಲ ಎಂಬುದನ್ನು ನಾನು ಕೇಳಿದ್ದೆ. ನನ್ನ ಕ್ಷೇತ್ರದಲ್ಲಿ ಬಹಳ ತಾರತಮ್ಯವಾಗುತ್ತಿದೆ ಎಂದು ತಮ್ಮ ಗಮನ ಸೆಳೆದಿದ್ದೆ. ಎಲ್ಲ ವಿಷಯಗಳನ್ನು ಚರ್ಚೆಗೆ ಹಾಕಿಕೊಂಡಿದ್ದೀರಿ. ಆದರೆ ನನ್ನದಕ್ಕೆ ಮಾತ್ರ ನೀವು ಡೇಟನ್ನು ಕೊಟ್ಟಿಲ್ಲ. ಏನು ಅಂಥ ಅಗಾಧವಾದಂಥ ಪ್ರಶ್ನೆಯನ್ನು ನಾನು ಹಾಕಿದ್ದೇನೆಯೆ?

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಕೊಟ್ಟಿದ್ದೀರಿ. ನಾನು ಒಳಗೆ ಇದ್ದೆ. ನೀವು ಇಲ್ಲಿ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿದೆ. ಅಲ್ಲಿ ಎಲ್ಲವನ್ನು ಲಿಸ್ಟ್ ಮಾಡಿದ್ದಾರೆ. ನನ್ನ ಹತ್ತಿರ ಬಂದು ನನ್ನದು ಈವತ್ತೆ ಹಾಕಿಕೊಳ್ಳಬೇಕು, ಅರ್ಜೆಂಟು ಅಂದಾಗ ಈವತ್ತು ಹಾಕಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ನನಗೆ ಗೊತ್ತಿಲ್ಲ. ನೀವು ಹೇಳಿಬಿಡಿ, ಮುಂದಕ್ಕೆ ನಾವು ತಮ್ಮ ಹತ್ತಿರ ಬಂದು ಕೇಳಿಕೊಳ್ಳಬೇಕೆಂದರೆ ಕೇಳಿಕೊಳ್ಳುತ್ತೇನೆ. ನನಗೇನು ಗೊತ್ತು?

ಅಧ್ಯಕ್ಷರು : ಕೇಳಿದಾಗ ಅವರು ಆ ರೀತಿಯ ಉತ್ತರ ಕೊಟ್ಟರು. ಈಗ ನಿಮ್ಮದು ಇದೆ. ನೀವು ಅದರ ಗಮನಸೆಳೆಯಿರಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಮುಖ್ಯಮಂತ್ರಿಯವರು ಇಲ್ಲೆ ಇದ್ದಾರೆ. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ. ನನ್ನ ಕ್ಷೇತ್ರದಲ್ಲಿ ಒಂದು ಸ್ವಲ್ಪ ಕೆಲಸವೂ ಆಗುತ್ತಿಲ್ಲ. ಜನರು ಓಡಾಡಲು ಆಗುತ್ತಿಲ್ಲ. ಗಾಡಿಗಳು ಓಡಾಡಲು ಆಗುತ್ತಿಲ್ಲ. ಈಗಾಗಲೆ ಬೇಕಾದಷ್ಟು accident ಗಳಾಗಿವೆ. ಹೊರಗಡೆಯಿಂದ ಬಂದವರೆಲ್ಲ ಉಗಿಯುತ್ತಿದ್ದಾರೆ. ಮುಖ್ಯಮಂತ್ರಿಗಳ ಏನು ಡಿಸ್‌ಕ್ರಿಷನರಿ ಖೋಟ ಇದೆ, ಮಂತ್ರಿಗಳದ್ದು ಇದೆ ಅದನ್ನು ನಾನು ಕೇಳುತ್ತಿಲ್ಲ. ಅದನ್ನು ಬೇಕಾದರೆ ಅವರಿಗೆ ಅಧಿಕಾರವಿದೆ ಯಾರಿಗೆ ಬೇಕಾದರು ಕೊಟ್ಟುಕೊಳ್ಳಲಿ. ಆದರೆ ಕ್ಷೇತ್ರವಾರು ಏನು ಗೈಡ್‌ಲೈನ್ಸ್ ನಿಗದಿಯಾಗಿದೆ, ಇಂತಿಂಥ ಕ್ಷೇತ್ರಕ್ಕೆ ಇಷ್ಟಿಷ್ಟು ಕೆಲಸ ಆಗಬೇಕು, ಇಷ್ಟು ರೋಡ್ ಇದೆ, ರೆಗ್ಯುಲರ್ ಗ್ರಾಂಟ್ ಇದೆ, ಆ ಗ್ರಾಂಟ್‌ನಲ್ಲಿ ಕೂಡ ಕೆಲಸವಾಗಲಿಲ್ಲವೆಂದರೆ, ಟೆಂಡರ್ ಕರೆದು "ಆ ಕೆಲಸ ಮಾಡಬೇಡ" ಎಂದು ಒಬ್ಬರ ಕೈಯಲ್ಲು ಕೆಲಸ ಮಾಡಿಸಲಿಲ್ಲವೆಂದರೆ ಏನು ಅನ್ಯಾಯ ಸ್ವಾಮಿ ಇದು? ಇದು ಯಾವ ರಾಜ್ಯ? ಅವರು ಖೋಟಾದಲ್ಲಿ ನಾನು ಕೇಳುವುದೇ ಇಲ್ಲ. ಅವರಿಗೆ ಪ್ರಜಾಪ್ರಭುತ್ವದಲ್ಲಿ ಹಕ್ಕಿದೆ. ಆದರೆ ರೆಗ್ಯುಲರ್ ಗ್ರಾಂಟ್‌ನಲ್ಲಿ ಕೂಡ ಕೆಲಸವಾಗಲಿಲ್ಲವೆಂದರೆ ಏನು? ನಾವು ಧರಣಿ ಮಾಡಿದೆವು. ಅಧಿಕಾರಿಗಳು ಬಂದರು, ಇಲ್ಲ ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಟೆಂಡರ್ ಕರೆದರು, ಈವತ್ತಿನವರೆಗು ಟೆಂಡರ್... ಸಿಂಧ್ಯಾರವರ ಕ್ಷೇತ್ರದಲ್ಲಿ ಕೆಲಸವಾಗುತ್ತಿದೆ. ರಾಮನಗರ ಕ್ಷೇತ್ರದಲ್ಲಿ ಕೆಲಸವಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲು ಕೆಲಸವಾಗುತ್ತಿದೆ. ಆದರೆ ಸಾತನೂರು ಕ್ಷೇತ್ರ ಏನು ತೊಂದರೆ ಮಾಡಿದೆ? ಏನು ಪಾಪ ಮಾಡಿದೆ? ಮುಖ್ಯಮಂತ್ರಿಗಳು ಇಲ್ಲೆ ಇದ್ದಾರೆ. ದಯಮಾಡಿ ನನ್ನ ಪ್ರಶ್ನೆಗಳಿಗೆ ಉತ್ತರಿಸಬೇಕು.

ಶ್ರೀ ಬಿ. ಶಿವರಾಮ್ : ನಿಮಗೆ ಇರುವ ಪರಿಸ್ಥಿತಿಯೆ ನಮಗೆ ಹಾಸನ ಜಿಲ್ಲೆಯಲ್ಲಿ ಗಂಡಸಿಗೂ ಇದೆ. ಟೆಂಡರ್ ನಾಲ್ಕು ನಾಲ್ಕು ರೌಂಡ್ ಆದರೂ ಬರುವುದಿಲ್ಲ. ಬಿಲ್ಲು ಕೊಡುವುದಿಲ್ಲ. ಆಗಿರುವ ಕೆಲಸಗಳನ್ನು ಇನ್‌ಪೆಕ್ಷನ್ ಮಾಡುವುದಿಲ್ಲ. ಆ ಒಂದು ವಾತಾವರಣ ನಿರ್ಮಾಣವಾಗುತ್ತ ಹೋದರೆ....

ಅಧ್ಯಕ್ಷರು : ಅವರು ಗಮನಸೆಳೆದಿದ್ದರೆ, ನೀವು ಮಧ್ಯದಲ್ಲಿ ಏಕೆ ಪ್ರವೇಶ ಮಾಡುತ್ತೀರಿ? ನೀವು ಬೇರೆ ಒಂದು ಏನಾದರು ಗಮನಸೆಳೆಯುವ ಸೂಚನೆ ಕೊಟ್ಟರೆ ಚರ್ಚೆಗೆ ಅವಕಾಶ ಮಾಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಶಿವಕುಮಾರ್‌ರವರೇನು ಏನು ವಿಷಯವನ್ನು ಎತ್ತಿದ್ದಾರೆ, ಇದಕ್ಕು ಮೊದಲು ಸಹ ಅವರು ಸದನದಲ್ಲಿ ಗಮನ ಸೆಳೆಯುವ ಸೂಚನೆ ಬರುತ್ತಿಲ್ಲವೆಂದು ಹೇಳಿದ್ದರು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಅಭಿವೃದ್ಧಿ ಕೆಲಸಗಳು ಉದ್ದೇಶಪೂರ್ವಕವಾಗಿ ಆಗುತ್ತಿಲ್ಲವೆಂದು ಹೇಳಿದ್ದಾರೆ. ನಾನು ಕೂಡ ಮುಖ್ಯಮಂತ್ರಿಯಾಗಿದ್ದಾಗ ಲೋಕೋಪಯೋಗಿ ಇಲಾಖೆಯಿಂದ ಅನ್ಯಾಯ ಆಗಿರುವುದು ನನ್ನ ಗಮನಕ್ಕೆ ಬಂತು. ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ವರದಿ ಬಂದ ಮೇಲೆ ನಾನು ಅಧಿಕಾರಿಗಳನ್ನು ಕರೆಸಿ ಎಷ್ಟೆಷ್ಟು ಕೆಲಸವಾಗಿದೆ, ಕೆಲಸ ಮಾಡಬೇಕೆಂದು ಎಷ್ಟೇ ಹೇಳಿದ್ದರು ಅಲ್ಲಿ ಕೆಲಸ ಆಗಿರಲಿಲ್ಲ. ಸನ್ಮಾನ್ಯ ಶಿವಕುಮಾರ್‌ರವರಿಗೆ ವಿಷಾದವಿದೆ. ಏಕೆಂದರೆ, he is a senior man, he was a minister. ಈವತ್ತು ಅವರ ಕ್ಷೇತ್ರದಲ್ಲಿ ಕೆಲಸ ಆಗುತ್ತಿಲ್ಲ ಎಂಬ ರೀತಿಯಲ್ಲಿ ಅಸಮಾಧಾನವಾಗಿದೆ. ಎಲ್ಲರು ಕೂಡ ಒಳಗಡೆ ಬರುತ್ತಾರೆ, ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆಂದು ಮಾನ್ಯ ಅಧ್ಯಕ್ಷರೆ ನೀವೇನು ಹೇಳಿದ್ದೀರಿ. ನಾನು ಕೇಳಿದರು ಕೂಡ ಉದ್ದೇಶಪೂರ್ವಕವಾಗಿ ಏಕೆ ಅವಕಾಶ ಕೊಡುತ್ತಿಲ್ಲ?

ಅಧ್ಯಕ್ಷರು : ಯಾರಿಗೆ?

ಶ್ರೀ ಎನ್. ಧರ್ಮಸಿಂಗ್ : ಅವರು ನಿಮಗೆ ಕೇಳುವುದು. ಎಲ್ಲರು ನಿಮ್ಮ ಕಛೇರಿಗೆ ಬಂದು ಕೇಳಿಕೊಳ್ಳುತ್ತಾರೆ, ಅವರೆಲ್ಲರ ವಿಷಯವನ್ನು ಇಲ್ಲಿ ಹಾಕುತ್ತೀರಿ ಎಂದು ಹೇಳಿದಿರಿ.

ಅಧ್ಯಕ್ಷರು : ಇನ್‌ಸಿಸ್ಟ್ ಮಾಡಿದರೆ ಹಾಕುತ್ತೇನೆಂದಲ್ಲ. ಎಲ್ಲರು ಕೊಟ್ಟಿರುವುದನ್ನು ಪಟ್ಟಿ ಮಾಡುತ್ತೇವೆ.

ಶ್ರೀ ಎನ್. ಧರ್ಮಸಿಂಗ್ : ನೋಡಬೇಕು.

ಅಧ್ಯಕ್ಷರು : ಕೆಲವರು ಬಂದು, ಈವತ್ತೆ ತನ್ನಿ ಬಹಳ ಅರ್ಜೆಂಟ್ ಎಂದು ಬರುತ್ತಾರೆ. ಆಗ ಕೇಳಿ ಎಂದು ಹೇಳಿದ್ದೇನೆ. ಆ ರೀತಿ ಆಗಿದೆ.

ಶ್ರೀ ಎನ್. ಧರ್ಮಸಿಂಗ್ : ನೀವು ಏಕೊ ಗಡಿಬಿಡಿ ಮಾಡುತ್ತಿದ್ದೀರಿ. ನೀವು ಗಡಿಬಿಡಿ ಮಾಡುವುದನ್ನು ಬಿಡುತ್ತಿಲ್ಲ.

ಅಧ್ಯಕ್ಷರು : ಆ ರೀತಿ ನಮ್ಮ ಆಫೀಸ್‌ನಲ್ಲಿ ಉತ್ತರವನ್ನು ಹೇಳಿದರು. ಅದನ್ನು ಅವರ ಅವಗಾಹನೆಗೆ ತಂದಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಎಲ್ಲಾ ಸದಸ್ಯರುಗಳಿಗೆ, ಯಾರು ಮಾಜಿ ಮಂತ್ರಿಗಳಾಗಿದ್ದಾರೆ ಎಲ್ಲರಿಗೂ ಕೂಡ ಬಿಸ್‌ನೆಸ್ ಮಾಡತಕ್ಕ ಕಾಲದಲ್ಲಿ ಅವಕಾಶ

ಕೊಡಬೇಕು. ಅದನ್ನೆಲ್ಲ ಪ್ರಯಾರಿಟಿ ನೋಡಿಕೊಂಡು ಮಾಡಬೇಕು. ಹಿಂದೆ ಕೂಡ ಮಾನ್ಯ ಸದಸ್ಯರು ಅವರು ಎತ್ತಿದ್ದರು. ಆಗ ನಾನು ಮುಖ್ಯಮಂತ್ರಿಯವರು ಬರುತ್ತಾರೆ. ಉತ್ತರ ಹೇಳುತ್ತಾರೆ ಎಂದು ಹೇಳಿದ್ದೆ. ಅವರನ್ನು ಕೇಳುತ್ತಿದ್ದಾರೆ. ಈವತ್ತಿನ ದಿವಸ ನನ್ನ ಕ್ಷೇತ್ರಕ್ಕೆ ಒಂದು ಲಕ್ಷ ರೂಪಾಯಿಯ ಕೆಲಸವಾಗಿಲ್ಲ. ನನ್ನ ಕ್ಷೇತ್ರಕ್ಕೆ ಉದ್ದೇಶಪೂರ್ವಕವಾಗಿ ಏಕೆ ಕೆಲಸವಾಗುತ್ತಿಲ್ಲ, ಈವತ್ತು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗು ಸರಿಸಮಾನವಾಗಿ ಕೆಲಸ ಮಾಡಬೇಕಾಗುತ್ತದೆ. ಇದು ಈವತ್ತಲ್ಲ, ನಾನು ಮುಖ್ಯಮಂತ್ರಿಯಾದಾಗಲು ಕೂಡ ಅವರು ಬಂದು ಬಂದು ಹೇಳಿದ್ದಾರೆ. ಮಾಡಲಿಕ್ಕೆ ಆಗಿಲ್ಲ. ಈವತ್ತು ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದಾರೆ, ಸ್ಪಷ್ಟವಾದಂಥ ಪ್ರಶ್ನೆಯನ್ನೇನು ಅವರು ಎತ್ತಿದ್ದಾರೆ ಅದಕ್ಕೆ ಸರ್ಕಾರದ ಪರವಾಗಿ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ 2004–05ನೇ ಆರ್ಥಿಕ ವರ್ಷದಲ್ಲಿ ಸಾತನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಬಾರ್ಡ್ ಕೇಂದ್ರ ರಸ್ತೆ ನಿಧಿ ಯೋಜನೆಯ ಅಡಿಯಲ್ಲಿ ರೂ. 142 ಲಕ್ಷಗಳಲ್ಲಿ ಮೂರು ಕಾಮಗಾರಿಗಳಿಗೆ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿತ್ತು ಕಾಮಗಾರಿಗಳು ಪ್ರಗತಿಯಲ್ಲಿದೆ. 2004–05ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ಯೋಜನೆಯ ಅಡಿಯಲ್ಲಿ ರೂ. 197 ಲಕ್ಷ ಮೊತ್ತದ 12 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು ಈ ಪೈಕಿ ಐದು ಕಾಮಗಾರಿಗಳ ಟೆಂಡರ್‌ನ್ನು ಅಂತಿಮಗೊಳಿಸಿ ಕಾರ್ಯಾದೇಶ ನೀಡಿದ್ದು ಇದುವರೆಗೆ ರೂ. 55 ಲಕ್ಷಗಳ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಉಳಿದ ಏಳು ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯನ್ನು 2004–05ನೇ ಸಾಲಿನಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ 7 ಕಾಮಗಾರಿಗಳ ಟೆಂಡರ್‌ದಾರರು 2005–06ನೇ ಸಾಲಿನಲ್ಲಿ ಅವರು ಸೂಚಿಸಿದ ದರಗಳಲ್ಲಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ ಪ್ರಯುಕ್ತ ಸದರಿ ಟೆಂಡರ್‌ಗಳನ್ನು ಹಿಂದಕ್ಕೆ ಪಡೆದು ಪುನಹ ದಿನಾಂಕ 5–1–2006ರಂದು ಮರು ಟೆಂಡರ್‌ನ್ನು ಕರೆಯಲಾಗಿದೆ. ಆದರೆ ನಿಗದಿತ ಸಮಯದಲ್ಲಿ ಯಾವುದೆ ಗುತ್ತಿಗೆದಾರರು ಟೆಂಡರ್ ಸಲ್ಲಿಸದೆ ಇರುವುದರಿಂದ ಟೆಂಡರ್ ಸಲ್ಲಿಸುವ ಕಾಲಾವಧಿಯನ್ನು ಕಾಲಕಾಲಕ್ಕೆ ವಿಸ್ತರಿಸುತ್ತ ಬಂದಿದ್ದು ಈಗ ಟೆಂಡರ್ ನೀಡುವ ಕೊನೆಯ ದಿನಾಂಕವನ್ನು 28–3–2006 ಎಂಬುದಾಗಿ ನಿಗದಿಪಡಿಸಲಾಗಿತ್ತು. ಈ ಕಾಮಗಾರಿಗಳಿಗೆ 12 ಟೆಂಡರ್‌ಗಳು ಬಂದಿವೆ. ಟೆಂಡರ್ ಪ್ರೋಸೆಸ್‌ನಲ್ಲಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಟೆಂಡರ್ ಕರೆದಿದ್ದಾರಂತೆ, ಯಾರೂ ಅರ್ಜಿ ಹಾಕಲಿಲ್ಲವಂತೆ, ಕೆಲಸ ಮಾಡಲು ಆಗುತ್ತಿಲ್ಲವಂತೆ. ಏಕೆ? ಸಾತನೂರು ಕ್ಷೇತ್ರದಲ್ಲಿ ಆಗದೇ ಇರುವಂಥದ್ದು ಏನಿದೆ? ಪಕ್ಕದ ಕನಕಪುರದಲ್ಲಿ ಕೆಲಸ ನಡೆಯುತ್ತಿದೆ, ರಾಮನಗರದಲ್ಲಿ ನಡೆಯುತ್ತಿದೆ. ರಾಮನಗರ ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರ, ಬಹಳ ಸಂತೋಷ.

ಚೆನ್ನಾಗಿ ಕೆಲಸವಾಗಲಿ. ಒಂದಕ್ಕೆ ನಾಲ್ಕರಷ್ಟು ಕೆಲಸವಾಗಲಿ. ಆದರೆ ನಮ್ಮಲ್ಲಿ ಅದರ ಹತ್ತು ಪರ್‌ಸೆಂಟ್ ಆದರೂ ಆಗಬಾರದೆ? ಕೇವಲ 51 ಲಕ್ಷ ರೂಪಾಯಿಯ ಕೆಲಸವಾಗುತ್ತಿದೆಯೆಂದು ಹೇಳುತ್ತಾರೆ. ಹಾಗಾದರೆ ಇಲ್ಲಿರುವಂಥ ಎಲ್ಲಾ ಸದಸ್ಯರುಗಳ ಕ್ಷೇತ್ರದಲ್ಲಿ ಎರಡು ವರ್ಷದಲ್ಲಿ ಕೇವಲ 51 ಲಕ್ಷ ರೂಪಾಯಿಯ ಕೆಲಸ ಆಗಿದೆಯೆ? ನಿಮ್ಮ ಕ್ಷೇತ್ರದಲ್ಲಿ ಲೆಕ್ಕ ತೆಗೆದುಕೊಳ್ಳಿ. ಅವರ ಕ್ಷೇತ್ರದಲ್ಲು ಇದೆ, 25 ಕೋಟಿ ರೂಪಾಯಿಯ ಕೆಲಸ ಆಗುತ್ತಿದೆ. ಒಳ್ಳೆಯದು, ಅವಕಾಶ ಬಂದಿದೆ ಮಾಡಿಕೊಳ್ಳಲಿ. ನಾನು ಇಲ್ಲವೆಂದು ಹೇಳುವುದಿಲ್ಲ. ಕೊನೆಯಪಕ್ಷ ಜಸ್ಟೀಸ್ ಬೇಡವೇ? ಈ ತಾರತಮ್ಯವನ್ನು ದಯವಿಟ್ಟು ಮುಖ್ಯಮಂತ್ರಿಗಳು ಸರಿಮಾಡಿಕೊಡಬೇಕು. ಇದರಲ್ಲಿ ರಾಜಕಾರಣ ಬೆರೆಸುವುದು ಉತ್ತಮವಾದದ್ದಲ್ಲ. ದಯವಿಟ್ಟು ಈ ತಾರತಮ್ಯವೇನಿದೆ ಇದನ್ನು ಸರಿಪಡಿಸುವುದಕ್ಕೆ ಈ ಮನೆಯಲ್ಲಿ ತಮ್ಮ ಮೂಲಕ ನಮಗೆ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈಗ ತಾನೆ ಅವರು ಒಂದು ಲಕ್ಷ ರೂಪಾಯಿಯ ಕೆಲಸವೂ ಆಗಿಲ್ಲವೆಂದರು. 55 ಲಕ್ಷ ರೂಪಾಯಿಯ ಕೆಲಸವಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ಲಕ್ಷ ಎಂದು ಹೇಳಿದೆ. ನಿಮ್ಮ ರೆಗ್ಯುಲರ್‌ನಲ್ಲಿ ಕೊಡಿಸಿದ್ದೀರಲ್ಲ. ಇದು ಎರಡು ವರ್ಷ ಹಿಂದಿನದ್ದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈಗಾಗಲೇ 6 ಕಾಮಗಾರಿಗಳಿಗೆ ಈಗ ಏನು ಟೆಂಡರ್ ಪ್ರೊಸೆಸ್ ಪ್ರಾರಂಭವಾಗಿದೆ.

ಶ್ರೀ ಬಿ. ಶಿವರಾಮ್ : ಈ ಪರಿಸ್ಥಿತಿ ವಿವಿಧ ಕ್ಷೇತ್ರಗಳಲ್ಲಿ ಮುಂದುವರೆದಿದೆ. ಏಕೆಂದರೆ....

ಅಧ್ಯಕ್ಷರು : ಶಿವರಾಮ್‌ರವರೆ, ಅವರು ಪ್ರಶ್ನೆಗೆ ಉತ್ತರ ಕೇಳುತ್ತಿದ್ದಾರೆ. ನಿಮ್ಮದೇನದು ಸಮಸ್ಯೆ?

ಶ್ರೀ ಬಿ. ಶಿವರಾಮ್ : ನಮ್ಮಲ್ಲು ಅದೇ ಪರಿಸ್ಥಿತಿ ಇದೆ. ಆದ್ದರಿಂದ ಕೇಳುತ್ತಿದ್ದೇನೆ.

ಅಧ್ಯಕ್ಷರು : ನಿಮ್ಮದು ಬೇರೆ ಕೇಳುವಿರಂತೆ ಸುಮ್ಮನೆ ಇರಿ.

ಶ್ರೀ ಡಿ.ಕೆ. ಶಿವಕುಮಾರ್ : ಇಡೀ ರಾಜ್ಯದಲ್ಲಿ ಈ ರೀತಿ ಅರ್ಜಿ ಹಾಕದೇ ಇರುವ ಯಾವುದಾದರು ಕೇಸು ಇದೆಯೆ? ಸಾತನೂರು ಮಾತ್ರ ಏಕೆ ಆ ರೀತಿಯಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ : ನೀವು ಶಾಸಕರಾಗಿ ಜವಾಬ್ದಾರಿ ತೆಗೆದುಕೊಂಡು ಯಾರಾದರಿಂದ ಅರ್ಜಿಯನ್ನು ಹಾಕಿಸಿದ್ದರೆ ಈ ಸಮಸ್ಯೆಯೆ ಬರುತ್ತಿರಲಿಲ್ಲವಲ್ಲ?

ಶ್ರೀ ಡಿ.ಕೆ. ಶಿವಕುಮಾರ್ : ಅರ್ಜಿಯಲ್ಲ. ಅಧಿಕಾರಿಗಳು ಅರ್ಜಿ ಹಾಕಬೇಡಿ, ದುಡ್ಡು ಕೊಡಲು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಸದಸ್ಯರು ಏನು ರಾಜಕೀಯವನ್ನು ಬೆರೆಸುವುದು ಬೇಡವೆಂದು ಹೇಳಿದ್ದಾರೆ, ಪ್ರತಿಯೊಬ್ಬ ಶಾಸಕರ ಹಕ್ಕು ಏನಿದೆ, ಆ ಒಂದು

ಕ್ಷೇತ್ರಗಳಲ್ಲಿ ಏನು ಕೆಲಸಗಳು ಆಗಬೇಕಾಗುತ್ತದೆ, ಅದರ ಬಗ್ಗೆ ನಾವು ಈಗ ಏನು ಹೊಸದಾಗಿ ಸರ್ಕಾರವನ್ನು ರಚನೆ ಮಾಡಿರುವ ಸಂದರ್ಭದಲ್ಲಿ, ಇನ್ನು ಮುಂದೆ ಆ ರೀತಿ ಘಟನೆಗಳಾಗಲು ಅವಕಾಶ ಕೊಡುವುದಿಲ್ಲವೆಂದು ಹೇಳಲು ಬಯಸುತ್ತೇನೆ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಭಾಧ್ಯಕ್ಷರೆ, ನಾನು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಕೆ.ಆರ್.ಎಸ್.ನಿಂದ ನಾವು ಬೇರೆ ಕಡೆಗಳಿಗೆ ನೀರನ್ನು ಕೊಡುತ್ತಿದ್ದೇವೆ. ಆದರೆ ಅಲ್ಲಿ ಕೆಲಸ ಆಗುತ್ತಿಲ್ಲವೆಂದು ಮಾನ್ಯ ಸಚಿವರು ಉತ್ತರ ಕೊಡಬಹುದು. ಆದರೆ ಹೋದ ಸಲ ಕೆ.ಆರ್.ಎಸ್. ತುಂಬಿದಾಗ, ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಖರ್ಗೆ ಸಾಹೇಬರು ಎಲ್ಲರೂ ಬಂದಿದ್ದಾಗ, ಅಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೆ ಆ ಕೆಲಸ ಇನ್ನೂ ಆಗಿಲ್ಲ. ಪ್ರತಿ ವರ್ಷವೂ ಕೂಡ ಕೆ.ಆರ್.ಎಸ್. ತುಂಬಿದಾಗಲೆಲ್ಲಾ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಪೂಜೆ ಮಾಡುತ್ತಾರೆ. ಆದರೆ ಕೆ.ಆರ್.ಎಸ್. ಮತ್ತು ಸುತ್ತಮುತ್ತ ಇರುವಂತಹ ಗ್ರಾಮಗಳಿಗೆ ಕುಡಿಯುವ ನೀರು ಕೊಡುತ್ತಿಲ್ಲ. ಅದೇ ರೀತಿಯಾಗಿ en-route villages, ಅಲ್ಲೂ ಕೂಡ ನೀರಿನ ಬಹಳಷ್ಟು ಅಗತ್ಯ ಇದೆ. ಮಾನ್ಯ ಅಧ್ಯಕ್ಷರೆ, ಈ ನನ್ನ ಪ್ರಶ್ನೆ ಬಹಳ ಮುಖ್ಯವಾದುದು. ಏಕೆಂದರೆ, ಶ್ರೀರಂಗಪಟ್ಟಣಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾಗ.....

ಅಧ್ಯಕ್ಷರು : ಶ್ರೀರಂಗಪಟ್ಟಣ ಟಿಪ್ಪೂ ಸುಲ್ತಾನ್‌ನ ನಾಡು.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಸಭಾಧ್ಯಕ್ಷರೆ, ಕೆ.ಆರ್.ಎಸ್. ನೀರು ಅಲ್ಲಿ.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಮೊದಲು ಸರ್ಕಾರದ ಗಮನ ಸೆಳೆಯಲಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಬೇಕಾದರೆ ಅವರು clarification ಕೇಳಲಿ. That is the procedure.

ಅಧ್ಯಕ್ಷರು : ಆಯಿತು, ಮೊದಲು ಗಮನ ಸೆಳೆಯಿರಿ, ನಂತರ ಉತ್ತರ ನೀಡಿ.

7. ಗಮನ ಸೆಳೆಯುವ ಸೂಚನೆ.

ವಿಷಯ: (ಅ) **ಶ್ರೀರಂಗಪಟ್ಟಣ ತಾಲ್ಲೂಕಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ.**

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಅಧ್ಯಕ್ಷರೆ, ಶ್ರೀರಂಗಪಟ್ಟಣ ತಾಲ್ಲೂಕಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗಿರುವ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು): ಮಂಡ್ಯ ಜಿಲ್ಲೆ, ಶ್ರೀರಂಗ ಪಟ್ಟಣ ತಾಲ್ಲೂಕು, ಕೆ.ಆರ್. ಸಾಗರ ಮತ್ತು ಸುತ್ತಮುತ್ತಲಿನ 5 ಗ್ರಾಮಗಳಾದ ಬಸ್ತಿಪುರ, ಹೊಂಗಹಳ್ಳಿ, ಹುಲಿಕೆರೆ, ಮಜ್ಜಿಗೆಪುರ ಮತ್ತು ಹೊಸುಂಡವಾಡಿ ಗ್ರಾಮಗಳಲ್ಲಿ 2091ರ